ಅರುಣ್‌ಜೇಟ್ಲಿ
ಸಂಸತ್ ಸದಸ್ಯರು
ವಿರೋಧ ಪಕ್ಷದ ನಾಯಕರು
(ರಾಜ್ಯ ಸಭಾ)

ಡಿಸೆಂಬರ್ 29, 2013

ಆತ್ಮೀಯಡಾ.ಮನಮೋಹನ್ ಸಿಂಗ್ ಅವರೆ,

ಹಿಮಾಚಲ ಪ್ರದೇಶದಲ್ಲಿ ದೀರ್ಘಾವಧಿ ಆಳ್ವಿಕೆ ನಡೆಸಿದ ಮುಖ್ಯ ಮಂತ್ರಿಗಳಲ್ಲಿ ಶ್ರೀ ವೀರಭದ್ರ ಸಿಂಗ್ ಒಬ್ಬರು.ಕಾಂಗ್ರೆಸ್ ಪಾರ್ಟಿಯ ಹಿರಿಯ ಸದಸ್ಯರೂ ಹೌದು. ಕಳೆದ 15 ತಿಂಗಳಿಂದ ಮಾಧ್ಯಮಗಳು ಅವರ ವಿರುದ್ಧ ಹಲವಾರು ಪ್ರಕರಣಗಳನ್ನು ಬಹಿರಂಗ ಪಡಿಸಿವೆ. ಪ್ರತ್ಯೇಕ ವಿಚಾರಗಳಲ್ಲಿ ಪ್ರಕರಣಗಳು ಬೆಳಕಿಗೆ ಬಂದಿದ್ದು, ಭ್ರಷ್ಟಾಚಾರ ನಿಯಂತ್ರಣಕಾಯ್ದೆಯಡಿಅವೆಲ್ಲವೂ ಅಪರಾಧಗಳಾಗಿವೆ. ತನಿಖಾ ಸಂಸ್ಥೆಗಳು ಸರ್ಕಾರದ ವಿರೋಧಿಗಳಿಗೆ ಕಿರುಕುಳ ನೀಡುವುದರಜೊತೆಗೆ, ಕಾನೂನು ಉಲ್ಲಂಘಿಸಿದವರು ಯುಪಿಎ ಸದಸ್ಯರಾದ ಪಕ್ಷದಲ್ಲಿಅವರುರೂಪಿಸುವ ಸಂಚಿನಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿವೆಎಂಬುದುಯುಪಿಎ ಸರ್ಕಾರದ ವಿರುದ್ಧ ನನ್ನಆಪಾದನೆಯಾಗಿದೆ. ಮೇಲಿನ ಆಪಾದನೆಯನ್ನು ಪ್ರತಿಪಾದಿಸುವ ವಿಚಾರಗಳನ್ನು ನನ್ನ ಈ ಪತ್ರದಲ್ಲಿ ವಿವರಿಸಿದ್ದೇನೆ.

<u>ಪ್ರಕರಣ 1– ದಿನಚರಿ ಪುಸ್ತಕಗಳ ನಮೂದುಗಳು</u>

ಇಸ್ಪಾತ್ ಸಮೂಹವೆಂಬ ಹೆಸರಿನಲ್ಲಿಖ್ಯಾತ ಉಕ್ಕು ತಯಾರಿಕಾಕಂಪನಿಯ ಕಚೇರಿಗಳನ್ನು ಶೋಧಿಸಿದ್ದ ವರಮಾನತೆರಿಗೆಇಲಾಖೆಯವರು ಕೆಲವು ದಿನಚರಿ ಪುಸ್ತಕಗಳನ್ನು ತಮ್ಮ ವಶಕ್ಕೆ ಪಡೆದಿದ್ದರು.2007 ರಿಂದ 2010ರ ನಡುವೆ ಕೆಲವು ಪ್ರಭಾರಿ ವ್ಯಕ್ತಿಗಳಿಗೆ ಸಂದಾಯವಾದ ಮೊಬಲಗು ಕುರಿತ ವಿವರಗಳು ಆ ದಿನಚರಿ ಪುಸ್ತಕದಲ್ಲಿ ನಮೂದಿಸಲ್ಪಟ್ಟದ್ದವು.ಉಕ್ಕು ಸಚಿವಾಲಯದ ಕೆಲವಾರು ಸಿಬ್ಬಂದಿಗಳು ಮತ್ತು ಸಚಿವಾಲಯಕ್ಕೆ ಸೇರಿದಅನ್ಯ ವ್ಯಕ್ತಿಗಳಿಗೆ ಸಂದಾಯವಾದ ಮೊತ್ತಗಳ ವಿವರಗಳನ್ನು ಅಲ್ಲಿ ನಮೂದಿಸಲಾಗಿತ್ತು.ಸಿಬಿಐ ಹಾಗೂ ಅನುಷ್ಠಾನ ನಿರ್ದೇಶನಾಲಯದ ಸಿಬ್ಬಂದಿಗಳಿಗಾಗಿ ಮಾಡಲಾದಖರ್ಚು ವೆಚ್ಚದ ವಿವರಗಳು ದಿನಚರಿ ಪುಸ್ತಕದಲ್ಲಿಉಲ್ಲೇಖಿಸಲಾಗಿತ್ತು.ಇದರೊಂದಿಗೆ 'ವಿಬಿಎಸ್' ಎಂಬ ವ್ಯಕ್ತಿಗೆ ನೀಡಲಾದ ಮೊತ್ತದ ನಮೂದನೆಗಳು ದಿನಚರಿ ಪುಸ್ತಕದಲ್ಲಿದರ್ಜಾಗಿದ್ದವು.ಆ ಅವಧಿಯಲ್ಲಿ ಉಕ್ಕು ಸಚಿವರಾಗಿದ್ದ ಶ್ರೀ ವೀರಭದ್ರ ಸಿಂಗ್ ಅವರ ಮೊದಲ ಅಕ್ಷರಗಳು 'ವಿಬಿಎಸ್' ಆಗಿವೆ. ವರಮಾನತೆರಿಗೆ ಇಲಾಖೆ ಹಾಗೂ ಸಿಬಿಐ ಇವೆರಡೂ ಸಂಸ್ಥೆಗಳು ನಮೂದನೆಗಳ ತನಿಖೆ ನಡೆಸಿ 'ವಿಬಿಎಸ್' ಎಂಬ ವ್ಯಕ್ತಿಯಾರೆಂದು ಪತ್ತೆ ಹಚ್ಚಬೇಕಿತ್ತು.ಮಾಧ್ಯಮ ವರದಿಗಳು ಮತ್ತು ದಾಖಲೆಗಳು ಬೆಳಕಿಗೆ ಬಂದಅವಧಿಯಲ್ಲೇ ನನ್ನ ಅನಿಸಿಕೆಗಳನ್ನು ಲೇಖನ ಒಂದರಲ್ಲಿ ವ್ಯಕ್ತಪಡಿಸಿದ್ದೆ.ಆ ಲೇಖನದ ಪ್ರತಿಯನ್ನುಇದರೊಂದಿಗೆ ಲಗ್ಗತ್ತಿಸಿದ್ದೇನೆ.

<u>ಪ್ರಕರಣ 2– ಅಕ್ರಮವಾಗಿ ಗಳಿಸಿದ ಹಣದ ಬಳಕೆ</u>

ಹಿಮಾಚಲ ಪ್ರದೇಶದಶಿಮ್ಲಾದಲ್ಲಿ ನಿರಂತರವಾಗಿ ಹಲವಾರು ಘಟನೆಗಳು ಜರುಗಿದವು.ಶ್ರೀ ಆನಂದ್‌ಚೌಹಾನ್ ಎಂಬ ವ್ಯಕ್ತಿ ಶಿಮ್ಲಾದ ಪಂಜಾಬ್ ನ್ಯಾಷನಲ್ ಬ್ಯಾಂಕ್ ಶಾಖೆಯಲ್ಲಿಖಾತೆ ಸಂಖ್ಯೆ 524185 ತೆರೆದುಐದುಕೋಟಿರೂಪಾಯಿಗೂ ಹೆಚ್ಚಿನ ಮೊತ್ತವನ್ನುಜಮಾ ಮಾಡಿದ.ಶ್ರೀ ವೀರಭದ್ರ ಸಿಂಗ್, ಅವರ ಪತ್ನಿ ಶ್ರೀಮತಿ ಪ್ರತಿಭಾ ಸಿಂಗ್, ಅವರ ಮಗ ಮತ್ತು ಮಗಳ ಹೆಸರಿನಲ್ಲಿಜೀವವಿಮೆ ಪಾಲಿಸಿಗಳನ್ನು ಪಡೆಯಲು, ತನ್ನಖಾತೆಯಿಂದ ಹಣ ಸಂದಾಯವಾಗುವಂತೆ ಹಲವಾರು ಚೆಕ್ಕುಗಳನ್ನು ಆನಂದ್‌ಚೌಹಾನ್ ನೀಡಿದ. ಶ್ರೀ ವೀರಭದ್ರ ಸಿಂಗ್ ಹಾಗೂ ಅವರಕುಟುಂಬ ಸದಸ್ಯರಅನುಕೂಲಕ್ಕಾಗಿಯೇಆನಂದ್‌ಚೌಹಾನ್ ಬ್ಯಾಂಕ್‌ಖಾತೆತೆಗೆದಿದ್ದರುಎಂದುಇದರಿಂದದೃಢಪಡುತ್ತದೆ. ವರಮಾನತೆರಿಗೆ ಇಲಾಖೆ ಈ ಅಂಶದತನಿಖೆ ನಡೆಸಿತ್ತು.

ಮಾರ್ಚ್ 2009, ಮಾರ್ಚ್ 2010 ಹಾಗೂ ಮಾರ್ಚ್ 2011ಗೆ ಅಂತ್ಯವಾಗುವ ಮೂರು ವರ್ಷಗಳಲ್ಲಿ ತಮ್ಮ ಸೇಬಿನ ತೋಟದಿಂದಅವರು ಸುಮಾರು ಏಳು ಲಕ್ಷ, 15 ಲಕ್ಷ ಹಾಗೂ 25 ಲಕ್ಷ ರೂಪಾಯಿಗಳ ವರಮಾನ ದಾಖಲಿಸಿದ್ದರು.17.6.2008 ದಿನಾಂಕದಒಪ್ಪಂದದಂತೆತೋಟದ ನಿರ್ವಹಣೆ ವಹಿಸಿಕೊಂಡ ಶ್ರೀ ಬಿಶಂಬರ್‌ದಾಸ್‌ಎಂಬುವರು ಶ್ರೀ ವೀರ್‌ಭದ್ರ ಸಿಂಗ್ ಅವರಿಗೆ ವಾರ್ಷಿಕ 10 ಲಕ್ಷ 50 ಸಾವಿರ ರೂಪಾಯಿಗಳನ್ನು ಮೂರು ವರ್ಷವೂ ನೀಡುತ್ತಾರೆ.

ಶ್ರೀ ಆನಂದ್‌ಚೌಹಾನ್ ಹಣವನ್ನು ಬ್ಯಾಂಕಿನಖಾತೆಗೆಜಮಾ ಮಾಡಿದ ನಂತರ ಆ ಹಣದಲ್ಲಿ ಶ್ರೀ ವೀರಭದ್ರ ಸಿಂಗ್ ಹಾಗೂ ಅವರಕುಟುಂಬ ಸದಸ್ಯರ ಹೆಸರಿನಲ್ಲಿಜೀವವಿಮೆ ಮಾಡಿಸಿದ ಎಂಬ ವಿಚಾರತನಿಖಾ ಸಂಸ್ಥೆಗಳ ಗಮನಕ್ಕೆ ಬಂದೊಡನೆ, ಮಾರ್ಚ್ 2, 2012ರಂದು ತಮ್ಮ ವರಮಾನತೆರಿಗೆ ವಿವರಗಳನ್ನು ಪರಿಷ್ಕರಿಸಿದ ಶ್ರೀ ವೀರಭದ್ರ ಸಿಂಗ್ ಅವರು, ಪೂರ್ವಾನ್ವಯವಾಗುವಂತೆತಮ್ಮ ಕೃಷಿ ವರಮಾನವನ್ನು 6.15 ಕೋಟಿ ರೂಪಾಯಿಗಳೆಂದು ದಾಖಲಿಸಿದರು. ಬಿಶಂಬರ್‌ದಾಸ್‌ಅವರೊಂದಿಗೆ ಮಾಡಿಕೊಂಡಒಪ್ಪಂದವು ಪೂರ್ವಾನ್ವಯವಾಗುವಂತೆಕಣ್ಮರೆಯಾಗಿಆನಂದ್‌ಚೌಹಾನ್‌ಅವರೊಂದಿಗೆ ಪೂರ್ವಾನ್ವಯವಾಗುವಂತೆಕರಾರುಆಗಿತ್ತುಎಂದುಅವರು ವಾದಿಸಿದರು.

ಈ ವಿಚಾರದಲ್ಲಿ ನನ್ನ ಲೇಖನವು 23/10/2012ರಂದು ಪ್ರಕಟವಾಗಿತ್ತು.ಅದರಒಂದು ಪ್ರತಿಯನ್ನು ಲಗ್ಗತ್ತಿಸಿದ್ದೇನೆ.

<u>ಪ್ರಕರಣ 3– ಸರ್ಕಾರದ ಕೃಪೆಗೆ ಪಾತ್ರನಾದ ವ್ಯಕ್ತಿಯಿಂದತಮ್ಮ ಹಾಗೂ ತಮ್ಮಕುಟುಂಬ ವರ್ಗಕ್ಕೆ ಪ್ರಯೋಜನ</u>

ಸಾಯಿಕೋಠಿ ಜಲವಿದ್ಯುತ್‌ಯೋಜನೆಯನ್ನು ವೆಂಚರ್‌ಎನರ್ಜಿಏಂಡ್‌ಟೆಕ್ನಾಲಜಿ ಪ್ರೈ.ಲಿ. ಎಂಬ ಸಂಸ್ಥೆಗೆ ಹಿಮಾಚಲ ಸರ್ಕಾರ 14/6/2002ರಂದು ನೀಡಿತು.ಈ ಕಂಪನಿಯುಯೋಜನೆಯನ್ನು ಕೈಗೆತ್ತಿಕೊಳ್ಳದೆ ಹೆಚ್ಚಿನಕಾಲಾವಕಾಶವನ್ನುಕೋರಿತು.ಇದಕ್ಕೆ ಸರ್ಕಾರಒಪ್ಪಿಗೆ ಸೂಚಿಸಿತ್ತು.ಈ ಮಧ್ಯೆ 20/9/2004ರಂದು ನೀಡಿದಗುತ್ತಿಗೆಯನ್ನು ರದ್ದುಗೊಳಿಸಿದ ಹಿಮಾಚಲ ಸರ್ಕಾರಎಚ್‌ಪಿಇಬಿ ಮುಖೇನ ಯೋಜನೆ ಕಾರ್ಯಗತಗೊಳಿಸುವ ನಿರ್ಧಾರತೆಗೆದುಕೊಂಡಿತು.ಇದಾದ ನಂತರತನ್ನ ನಿರ್ಣಯವನ್ನು ಪರಿಶೀಲಿಸಿದ ಸರ್ಕಾರ, ಹೆಚ್ಚಿನಕಾಲಾವಕಾಶದೊಂದಿಗೆಯೋಜನೆಯನ್ನು

ಮತ್ತೊಮ್ಮೆ ಖಾಸಗಿ ಸಂಸ್ಥೆಗೆ ನೀಡಿತು.4/9/2013ರಂದು ಶ್ರೀ ವೀರಭದ್ರ ಸಿಂಗ್ ಅವರು ಹಿಮಾಚಲ ಪ್ರದೇಶದ ಮುಖ್ಯ ಮಂತ್ರಿ ಸ್ಥಾನವನ್ನು ಮತ್ತೊಮ್ಮೆ ಗಳಿಸಿದಾಗ, ಖಾಸಗಿ ಕಂಪನಿಗೆ 10 ತಿಂಗಳುಗಳ ಹೆಚ್ಚಿನ ಕಾಲಾವಕಾಶ ನೀಡಲಾಯಿತು ಹಾಗೂ ಕೆಲವು ಪಾವತಿ ಶರತ್ತುಗಳನ್ನು ಅದರ ಮೇಲೆ ವಿಧಿಸಲಾಯಿತು.

ಕಂಪನಿಗೆ ಸರ್ಕಾರದಕೃಪಾಕಟಾಕ್ಷದೊರೆತಿದೆ ಅನಿಸುತ್ತಿತ್ತು.ವಿಚಾರಇಲ್ಲಿಗೆ ಮುಗಿಯುವುದಿಲ್ಲ. ದೊರೆತಕೃಪಾಕಟಾಕ್ಷದ ಪ್ರತಿಫಲವಾಗಿ ಶ್ರೀ ವೀರಭದ್ರ ಸಿಂಗ್ ಹಾಗೂ ಅವರಕುಟುಂಬ ಸದಸ್ಯರಿಗೆಕಂಪನಿಯುಇದೇ ಸಮಯಕ್ಕೆ ಸರಿಯಾಗಿ ಲಾಭ ಮಾಡಿಕೊಟ್ಟಿತು. ಕೆಳಕಂಡ ದಾಖಲಾತಿಗಳಿಂದ ಈ ಆರೋಪಕ್ಕೆ ಪುಷ್ಠಿ ದೊರೆಯುತ್ತದೆ:

- ಹಿಮಾಚಲ ಪ್ರದೇಶದ ವಿಧಾನ ಸಭಾಚುನಾವಣೆಯಚುನಾವಣಾಅಧಿಕಾರಿಗೆ ಶ್ರೀ ವೀರಭದ್ರ ಸಿಂಗ್ ಅವರುತಮ್ಮ ಆಸ್ತಿ ವಿವರ ನೀಡುವ ಪ್ರಮಾಣಪತ್ರ ಸಲ್ಲಿಸಿದ್ದರು. ಕಂಪನಿಯುಅವರಿಗೆ ನೀಡಿದ ಹಣದಕುರಿತು ಈ ಪ್ರಮಾಣಪತ್ರದಲ್ಲಿಎಲ್ಲೂಉಲ್ಲೇಖವಿಲ್ಲ.
- ಶ್ರೀ ವೀರಭದ್ರ ಸಿಂಗ್ ರಾಜಿನಾಮೆ ನೀಡಿದ ಬಳಿಕ, ಮಂಡಿ ಸಂಸತ್ ಮತಕ್ಷೇತ್ರದಿಂದ ಶ್ರೀಮತಿ ಪ್ರತಿಭಾ ಸಿಂಗ್ ಅವರು ಉಪ ಚುನಾವಣೆಯಲ್ಲಿ ಪ್ರತಿಸ್ಪರ್ದಿಗಳಾಗಿದ್ದರು. ಅವರುತಮ್ಮ ಆಸ್ತಿ ವಿವರ ಪ್ರಮಾಣಪತ್ರವನ್ನು 30/5/2013ರಂದು ಸಲ್ಲಿಸಿದರು. ಆ ಪ್ರಮಾಣಪತ್ರದಅನುಸಾರ ವಿದ್ಯುತ್‌ಯೋಜನೆಯ ಮಾಲೀಕರಾದ ಶ್ರೀ ವಕಮುಲ್ಲಾಚಂದ್ರಶೇಖರ್‌ಅವರು ಶ್ರೀಮತಿ ಪ್ರತಿಭಾ ಸಿಂಗ್ ಅವರಿಗೆ 1.5 ಕೋಟಿ ರೂಪಾಯಿಗಳು ಹಾಗೂ ಶ್ರೀ ವೀರಭದ್ರ ಸಿಂಗ್ ಅವರಿಗೆ 2.40 ಕೋಟಿ ರೂಪಾಯಿಗಳ ಅಭದ್ರ ಸಾಲವನ್ನು ನೀಡಿರುವುದಾಗಿ ನಮೂದಿಸಲಾಗಿತ್ತು. ಮುಖ್ಯ ಮಂತ್ರಿಗಳ ಕೃಪೆಗೆ ಪಾತ್ರವಾದ ಕಂಪನಿಯಿಂದಲೇ ಮುಖ್ಯ ಮಂತ್ರಿಗಳು ಮತ್ತುಅವರ ಪತ್ನಿ ಸಾಲ ಪಡೆಯಬಹುದೇ?
- ಇದೇಅವಧಿಯಲ್ಲಿ ಲಭ್ಯವಾದ ದಾಖಲಾತಿಗಳ ಅನುಸಾರ ಶ್ರೀ ವೀರಭದ್ರ ಸಿಂಗ್ ಹಾಗೂ ಅವರಕುಟುಂಬ ಸದಸ್ಯರ ಬ್ಯಾಂಕ್ ಖಾತೆಗಳಲ್ಲಿ ಹೇರಳವಾದ ಹಣವಿದ್ದ ವಿಚಾರ ತಿಳಿದುಬರುತ್ತದೆ. ಅವರಿಗೆ ಸಾಲದಆವಶ್ಯಕತೆಇರಲಿಲ್ಲ.
- ಹತ್ತು ತಿಂಗಳುಗಳ ಹೆಚ್ಚುವರಿ ಸಮಯಾವಕಾಶ ಪಡೆದಕಂಪನಿಯು ನೀಡಬೇಕಾದ 58.19 ಲಕ್ಷ ರೂಪಾಯಿಗಳನ್ನು ಅದುಈವರೆಗೂ ನೀಡಿಲ್ಲ.
- ಕಂಪನಿಯ ಮಾಲೀಕರಾದ ಶ್ರೀ ವಕಮುಲ್ಲಾಚಂದ್ರಶೇಖರ್ ಹಾಗೂ ಕಂಪನಿಯು ಭಾರಿ ಸಾಲ ಮಾಡಿಕೊಂಡಿದೆ. ಸಾಲದ ಸುಳಿಯಲ್ಲಿ ಸಿಲುಕಿರುವ ಕಂಪನಿಯು ಸಾಲ ನೀಡುವ ಅನಿವಾರ್ಯತೆಯಾದರೂಏನಿತ್ತು.
- ಈಗ ಬೆಳಕಿಗೆ ಬಂದ ವಿಚಾರವೆಂದರೇ, ಶ್ರೀ ವಕಮುಲ್ಲಾಚಂದ್ರಶೇಖರ್‌ಅವರ ಮಾಲೀಕತ್ವದತಾರಿಣಿಇನ್ಫ್ರಾಸ್ಟ್ರಕ್ಚರ್ ಎಂಬ ಮತ್ತೊಂದುಕಂಪನಿಯು, ಕಂಪನಿಗಳ ನೋಂದಣಾಧಿಕಾರಿಗೆ ಸಲ್ಲಿಸಿದ ದಾಖಲಾತಿ ಪ್ರಕಾರ 29.9.2012 ರಿಂದಅನ್ವಯವಾಗುವಂತೆ ಶ್ರೀಮತಿ ಪ್ರತಿಭಾ ಸಿಂಗ್ ಅವರು 3,40,000 ಷೇರುಗಳನ್ನು, ಅವರ ಮಗ ಶ್ರೀ

ವಿಕ್ರಮಾದಿತ್ಯ ಸಿಂಗ್ 3,40,000 ಷೇರುಗಳನ್ನು ಹಾಗೂ ಮಗಳು ಕು.ಅಪರಾಜಿತಕುಮಾರಿ 3,40,000 ಷೇರುಗಳನ್ನು ಪಡೆದಿರುತ್ತಾರೆ. ಇದಲ್ಲದೆ ಮುಖ್ಯ ಮಂತ್ರಿಗಳ ವಿಶೇಷ ಅಧಿಕಾರಿ ಶ್ರೀ ಅಮಿತ್ ಪಾಲ್ ಸಿಂಗ್ ಕಂಪನಿಯ 10,000 ಷೇರುಗಳನ್ನು ಪಡೆದಿರುತ್ತಾರೆ.

- ಲಭ್ಯವಾದ ಹೊಸ ದಾಖಲೆಗಳ ಪ್ರಕಾರ, ಮುಖ್ಯ ಮಂತ್ರಿಗಳು ಮತ್ತುಅವರ ಪತ್ನಿ ಸಾಲ ಪಡೆದ ಕಂಪನಿಗೆ ಸರ್ಕಾರದಅನುಗ್ರಹ ಲಭಿಸಿದೆ. ಹೆಚ್ಚುವರಿಯಾಗಿ, ಸಮೂಹ ಸಂಸ್ಥೆಯೊಂದರಲ್ಲಿಅವರ ಪತ್ನಿ ಹಾಗೂ ಮಕ್ಕಳು ಷೇರುದಾರರಾಗಿದ್ದಾರೆ. ನೀಡಿದಅನುಗ್ರಹಕ್ಕೆ ಪ್ರತಿಫಲ ಪಡೆಯಲಾಗಿದೆಎಂಬುದಕ್ಕೆಇದಕ್ಕಿಂತಲೂ ಪ್ರಬಲವಾದ ಸಾಕ್ಷಿ ಮತ್ತೊಂದಿಲ್ಲ.
- ಮೇಲ್ಕಂಡ ಪ್ರತ್ಯೇಕ ಹಾಗೂ ಸಮಗ್ರವಾದ ಪ್ರಕರಣಗಳು ಭ್ರಷ್ಟಾಚಾರ ನಿಯಂತ್ರಣಾಕಾಯಿದೆಯಡಿ ಅಪರಾಧಗಳಾಗಿದ್ದು ಹಲವು ವಿಭಿನ್ನಕಂದಾಯ ಕಾನೂನುಗಳ ಉಲ್ಲಂಘನೆಯಾಗಿದೆ.

ವರಮಾನತೆರಿಗೆ ಇಲಾಖೆ ಹಾಗೂ ಸಿಬಿಐ ತಕ್ಷಣ ಈ ಎಲ್ಲಾ ಪ್ರಕರಣಗಳ ತನಿಖೆ ನಡೆಸಬೇಕಿದೆ.ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ನಿಮ್ಮಲ್ಲಿಕೋರುತ್ತೇನೆ.

ಗೌರವಾದರದೊಂದಿಗೆ,

ನಮ್ಮ ವಿಶ್ವಾಸಿ
(ಅರುಣ್‌ಜೇಟ್ಲಿ)

ಗೆ,
ಡಾ.ಮನಮೋಹನ್ ಸಿಂಗ್
ಪ್ರಧಾನ ಮಂತ್ರಿಗಳು
ನವದೆಹಲಿ
ಮೇಲ್ಕಂಡಂತೆ ಲಗ್ಗತ್ತಿಸಲಾಗಿದೆ